# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು

**ವಿಷಯದ ಸಂಖ್ಯೆ:298/2008-09**

ಜಂಟಿ ಆಯುಕ್ತರು(ದಾಸರಹಳ್ಳಿ) ವಲಯದ ಹೇರೋಹಳ್ಳಿ ಉಪ ವಿಭಾಗದ ಶ್ರೀಗಂಧ ಕಾವಲು, ಸುಂಕದಕಟ್ಟೆಯಲ್ಲಿರುವ ಪಿ ಅಂಡ್ ಟಿ ಬಡಾವಣೆಯ ಮುಖ್ಯರಸ್ತೆ - ಮಾಗಡಿ ರಸ್ತೆಯಿಂದ ಪೈಪ್‌ಲೈನ್ ರಸ್ತೆಯವರೆಗೂ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಹೇರೋಹಳ್ಳಿ ಉಪ ವಿಭಾಗದ ಶ್ರೀಗಂಧ ಕಾವಲು, ಸುಂಕದಕಟ್ಟೆಯಲ್ಲಿರುವ ಪಿ ಅಂಡ್ ಟಿ ಬಡಾವಣೆಯ ಮುಖ್ಯರಸ್ತೆ - ಮಾಗಡಿ ರಸ್ತೆಯಿಂದ ಪೈಪ್‌ಲೈನ್ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಅದೇಶಿಸಿರುವ ಮೇರೆಗೆ, ಸ್ಥಳ ಪರಿಶೀಲಿಸಿ ಅದರ ಉದ್ದ ಸುಮಾರು 900 ಮೀಟರ್‌ಗಳಿದ್ದು, ಸದರಿ ಕಾಮಗಾರಿಗೆ ದಾಸರಹಳ್ಳಿ ವಲಯದ ಕಾರ್ಯಪಾಲಕ ಅಭಿಯಂತರರು 2007-08ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಎಸ್.ಆರ್.ದರಗಳ ಆಧಾರದ ಮೇಲೆ ರೂ.49.50 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಸದರಿ ಅಂದಾಜು ಪಟ್ಟಿಯಲ್ಲಿ ರಸ್ತೆಯನ್ನು ಸಮತಟ್ಟು ಮಾಡಿ ಫಾರ್‌ಮೇಷನ್ ಮಾಡುವುದು, ಜಿ.ಎಸ್.ಬಿ., ಡಬ್ಲ್ಯೂ.ಎಂ.ಎಂ. 50 ಎಂ.ಎಂ. ದಪ್ಪ ಪದರದ ಬಿಟುಮಿನ್ ಮೆಕಾಡಮ್, 25 ಎಂ.ಎಂ. ಎಸ್.ಡಿ.ಬಿ.ಸಿ. ಕಾಮಗಾರಿಗಳು ಒಳಗೊಂಡಿರುತ್ತದೆ ಹಾಗೂ ಈ ಕಾಮಗಾರಿಯು ಅವಶ್ಯಕವಾಗಿರುವುದರಿಂದ ಕಾಮಗಾರಿಯ ಅಂದಾಜುಪಟ್ಟಿ ರೂ.49.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಅಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:19/06/2008.

**ತೀರ್ಮಾನ:** ಆಯುಕ್ತರವರ ದಿನಾಂಕ:19/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು

**ವಿಷಯದ ಸಂಖ್ಯೆ:298/2008–09**

ಜಂಟಿ ಆಯುಕ್ತರು(ದಾಸರಹಳ್ಳಿ) ವಲಯದ ಹೇರೋಹಳ್ಳಿ ಉಪ ವಿಭಾಗದ ಶ್ರೀಗಂಧ ಕಾವಲು, ಸುಂಕದಕಟ್ಟೆಯಲ್ಲಿರುವ ಪಿ ಅಂಡ್ ಟಿ ಬಡಾವಣೆಯ ಮುಖ್ಯರಸ್ತೆ – ಮಾಗಡಿ ರಸ್ತೆಯಿಂದ ಪೈಪ್‌ಲೈನ್ ರಸ್ತೆಯವರೆಗೂ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಹೇರೋಹಳ್ಳಿ ಉಪ ವಿಭಾಗದ ಶ್ರೀಗಂಧ ಕಾವಲು, ಸುಂಕದಕಟ್ಟೆಯಲ್ಲಿರುವ ಪಿ ಅಂಡ್ ಟಿ ಬಡಾವಣೆಯ ಮುಖ್ಯರಸ್ತೆ – ಮಾಗಡಿ ರಸ್ತೆಯಿಂದ ಪೈಪ್‌ಲೈನ್ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಅದೇಶಿಸಿರುವ ಮೇರೆಗೆ, ಸ್ಥಳ ಪರಿಶೀಲಿಸಿ ಅದರ ಉದ್ದ ಸುಮಾರು 900 ಮೀಟರ್‌ಗಳಿದ್ದು, ಸದರಿ ಕಾಮಗಾರಿಗೆ ದಾಸರಹಳ್ಳಿ ವಲಯದ ಕಾರ್ಯಪಾಲಕ ಅಭಿಯಂತರರು 2007–08ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಎಸ್.ಆರ್.ದರಗಳ ಆಧಾರದ ಮೇಲೆ ರೂ.49.50 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಸದರಿ ಅಂದಾಜು ಪಟ್ಟಿಯಲ್ಲಿ ರಸ್ತೆಯನ್ನು ಸಮತಟ್ಟು ಮಾಡಿ ಫಾರ್‌ಮೇಷನ್ ಮಾಡುವುದು, ಜಿ.ಎಸ್.ಬಿ., ಡಬ್ಲ್ಯೂ.ಎಂ.ಎಂ. 50 ಎಂ.ಎಂ. ದಪ್ಪ ಪದರದ ಬಿಟುಮಿನ್ ಮೆಕಾಡಮ್, 25 ಎಂ.ಎಂ. ಎಸ್.ಡಿ.ಬಿ.ಸಿ. ಕಾಮಗಾರಿಗಳು ಒಳಗೊಂಡಿರುತ್ತದೆ ಹಾಗೂ ಈ ಕಾಮಗಾರಿಯು ಅವಶ್ಯಕವಾಗಿರುವುದರಿಂದ ಕಾಮಗಾರಿಯ ಅಂದಾಜುಪಟ್ಟಿ ರೂ.49.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಅಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:19/06/2008.

**ತೀರ್ಮಾನ:** ಆಯುಕ್ತರವರ ದಿನಾಂಕ:19/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು**

**ವಿಷಯದ ಸಂಖ್ಯೆ:301/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-7ರಲ್ಲಿ ಬರುವ ಯಶವಂತಪುರ ಮೇಲುಸೇತುವೆ, ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕೆ ಸಾರ್ವಜನಿಕ ಮತ್ತು ಸಂಸ್ಥೆಗಳ ಆಸ್ತಿಯನ್ನು ಭೂ-ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ,

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-7ರಲ್ಲಿ ಬರುವ ಈ ಕೆಳಗೆ ಕಾಣಿಸಿರುವ ಖಾಸಗಿ ಮತ್ತು ಸಂಸ್ಥೆಗಳಿಗೆ ಸೇರಿದ ಸ್ವತ್ತುಗಳನ್ನು ಸಾರ್ವಜನಿಕರುಗಳ ಸೌಲಭ್ಯಗಳಿಗೆ, ಅಂದರೆ ಯಶವಂತಪುರ ಮೇಲುಸೇತುವೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂ-ಸ್ವಾಧೀನಪಡಿಸಿಕೊಂಡು, ಸ್ವತ್ತಿನ ಭೂ-ಮಾಲೀಕರುಗಳಿಗೆ ಪರಿಹಾರ ನೀಡಲು ಉದ್ದೇಶಿಸಲಾಗಿದೆ.

| ಕ್ರ.ಸಂ | ಖಾತೇದಾರರ ಹೆಸರು ಸಿ.ಟಿ.ಎಸ್. ದಾಖಲೆಯಂತೆ | ಅನುಭವದಾರರ ಹೆಸರು | ಸಿ.ಟಿ.ಎಸ್.ನಂ/ ಖಾತೆ ನಂ. | ಭೂ-ಸ್ವಾಧೀನಕ್ಕೆ ಬೇಕಾದ ವಿಸ್ತೀರ್ಣ ಚ.ಮೀ.ಗಳಲ್ಲಿ | ಜಾಗದ ತರಹೆ |
|---|---|---|---|---|---|
| 1 | 2 | 3 | 4 | 5 | 6 |
| 1 | - | ಮೆ॥ ಗ್ರೇಸಿ ಅಬ್ರಹಾಂ<br>ಮೆ॥ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. ಗುತ್ತಿಗೆ | ಖಾತೆ ನಂ.89, 89/1<br>ಸಿ.ಟಿ.ಎಸ್.ನಂ.65 | 221.59 | ಖಾಲಿ ಜಾಗ |
| 2 | ಸಿ.ವೆಂಕಟಪ್ಪ | ಆರ್.ವೆಂಕಟೇಶ | ಖಾತೆ ನಂ.88,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 3 | ಸಿ.ವೆಂಕಟಪ್ಪ | ಮೇರಿ ವಸಂತ ಜೋಸೆಫ್ | ಖಾತೆ ನಂ.87,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 4 | ಸಿ.ವೆಂಕಟಪ್ಪ | ಬಿ.ಎನ್.ಧನಲಕ್ಷ್ಮಿ | ಖಾತೆ ನಂ.86,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 5 | ಸಿ.ವೆಂಕಟಪ್ಪ | ಸಿ.ವಿ.ಶೈಲಜ | ಖಾತೆ ನಂ.83,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 6 | ಸಿ.ವೆಂಕಟಪ್ಪ | ಬಿ.ಕ್ಯಾಸ್ಪರ್ | ಖಾತೆ ನಂ.82,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 7 | ಸಿ.ವೆಂಕಟಪ್ಪ | ಬಿ.ಕ್ಯಾಸ್ಪರ್ | ಖಾತೆ ನಂ.81,<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 18.50<br>19.00<br>**37.50** | ಖಾಲಿ ಜಾಗ |
| 8 | - | ಬಿ.ಜೆ.ಅಮೃತರಾಜ್ | ಖಾತೆ ನಂ.80,<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 4.00<br>37.50<br>**41.50** | ಖಾಲಿ ಜಾಗ |
| 9 | - | ಆಲ್ಬರ್ಟ್ ಜೋಸೆಫ್ | ಖಾತೆ ನಂ.79<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 5.00<br>37.00<br>**42.00** | ಖಾಲಿ ಜಾಗ |

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು

**ವಿಷಯದ ಸಂಖ್ಯೆ:301/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-7ರಲ್ಲಿ ಬರುವ ಯಶವಂತಪುರ ಮೇಲುಸೇತುವೆ, ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕೆ ಸಾರ್ವಜನಿಕ ಮತ್ತು ಸಂಸ್ಥೆಗಳ ಆಸ್ತಿಯನ್ನು ಭೂ-ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ,

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-7ರಲ್ಲಿ ಬರುವ ಈ ಕೆಳಗೆ ಕಾಣಿಸಿರುವ ಖಾಸಗಿ ಮತ್ತು ಸಂಸ್ಥೆಗಳಿಗೆ ಸೇರಿದ ಸ್ವತ್ತುಗಳನ್ನು ಸಾರ್ವಜನಿಕರುಗಳ ಸೌಲಭ್ಯಗಳಿಗೆ, ಅಂದರೆ ಯಶವಂತಪುರ ಮೇಲುಸೇತುವೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂ-ಸ್ವಾಧೀನಪಡಿಸಿಕೊಂಡು, ಸ್ವತ್ತಿನ ಭೂ-ಮಾಲೀಕರುಗಳಿಗೆ ಪರಿಹಾರ ನೀಡಲು ಉದ್ದೇಶಿಸಲಾಗಿದೆ.

| ಕ್ರ.ಸಂ | ಖಾತೇದಾರರ ಹೆಸರು ಸಿ.ಟಿ.ಎಸ್. ದಾಖಲೆಯಂತೆ | ಅನುಭವದಾರರ ಹೆಸರು | ಸಿ.ಟಿ.ಎಸ್.ನಂ/ ಖಾತೆ ನಂ. | ಭೂ-ಸ್ವಾಧೀನಕ್ಕೆ ಬೇಕಾದ ವಿಸ್ತೀರ್ಣ ಚ.ಮೀ.ಗಳಲ್ಲಿ | ಜಾಗದ ತರಹೆ |
|---|---|---|---|---|---|
| 1 | 2 | 3 | 4 | 5 | 6 |
| 1 | - | ಮೆ॥ ಗ್ರೇಸಿ ಅಬ್ರಹಾಂ<br>ಮೆ॥ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. ಗುತ್ತಿಗೆ | ಖಾತೆ ನಂ.89, 89/1<br>ಸಿ.ಟಿ.ಎಸ್.ನಂ.65 | 221.59 | ಖಾಲಿ ಜಾಗ |
| 2 | ಸಿ.ವೆಂಕಟಪ್ಪ | ಆರ್.ವೆಂಕಟೇಶ | ಖಾತೆ ನಂ.88,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 3 | ಸಿ.ವೆಂಕಟಪ್ಪ | ಮೇರಿ ವಸಂತ ಜೋಸೆಫ್ | ಖಾತೆ ನಂ.87,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 4 | ಸಿ.ವೆಂಕಟಪ್ಪ | ಬಿ.ಎನ್.ಧನಲಕ್ಷ್ಮಿ | ಖಾತೆ ನಂ.86,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 5 | ಸಿ.ವೆಂಕಟಪ್ಪ | ಸಿ.ವಿ.ಶೈಲಜ | ಖಾತೆ ನಂ.83,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 6 | ಸಿ.ವೆಂಕಟಪ್ಪ | ಬಿ.ಕ್ಯಾಸ್ಪರ್ | ಖಾತೆ ನಂ.82,<br>ಸಿ.ಟಿ.ಎಸ್.ನಂ.70 | 37.50 | ಖಾಲಿ ಜಾಗ |
| 7 | ಸಿ.ವೆಂಕಟಪ್ಪ | ಬಿ.ಕ್ಯಾಸ್ಪರ್ | ಖಾತೆ ನಂ.81,<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 18.50<br>19.00<br>**37.50** | ಖಾಲಿ ಜಾಗ |
| 8 | - | ಬಿ.ಜೆ.ಅಮೃತರಾಜ್ | ಖಾತೆ ನಂ.80,<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 4.00<br>37.50<br>**41.50** | ಖಾಲಿ ಜಾಗ |
| 9 | - | ಆಲ್ಬರ್ಟ್ ಜೋಸೆಫ್ | ಖಾತೆ ನಂ.79<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 5.00<br>37.00<br>**42.00** | ಖಾಲಿ ಜಾಗ |

| 1 | 2 | 3 | 4 | 5 | 6 |
|---|---|---|---|---|---|
| 10 | – | ಬಿ.ಫೋಬೀಸ್ | ಖಾತೆ ನಂ.73<br>ಸಿ.ಟಿ.ಎಸ್.ನಂ.70<br>ರಸ್ತೆ ಮಾರ್ಜಿನ್ | 45.11<br>123.00<br>168.11 | ಎ.ಸಿ.ಶೀಟ್ ಕಟ್ಟಡ ಮತ್ತು ಖಾಲಿ ಜಾಗ |
| 11 | ಕಾರ್ಪೋರೇಷನ್ | ಎಸ್.ಗುರಸ್ವಾಮಿ | ಖಾತೆ ನಂ.72<br>ಸಿ.ಟಿ.ಎಸ್.ನಂ.77 | 16.30 | ಆರ್.ಸಿ.ಸಿ ಕಟ್ಟಡ ಎ.ಟಿ.ಎಂ.ಬ್ಯಾಂಕ್ |
| 12 | ಕಾರ್ಪೋರೇಷನ್ | ರವಿ ಮತ್ತು ಆನಂದ | ಖಾತೆ ನಂ.71<br>ಸಿ.ಟಿ.ಎಸ್.ನಂ.77 | 15.56 | ಕಟ್ಟಡ |
| 13 | ಕಾರ್ಪೋರೇಷನ್ | ಎಂ.ಟಿ.ಪಿ.ಯೂಸುಫ್ | ಖಾತೆ ನಂ.70<br>ಸಿ.ಟಿ.ಎಸ್.ನಂ.77 | 14.94 | ಕಟ್ಟಡ |
| 14 | ಕಾರ್ಪೋರೇಷನ್ | ಎಂ.ಸಿ.ವೆಂಕಟೇಶ್ | ಖಾತೆ ನಂ.69<br>ಖಾತೆ ನಂ.68<br>ಸಿ.ಟಿ.ಎಸ್.ನಂ.77 | 44.06 | ಶ್ರೇಯಸ್ ಬಾರ್ ಮತ್ತು ರೆಸ್ಟೋರೆಂಟ್ |
| 15 | – | ಎನ್. ಚಂಗಲರಾಯ ಮೊದಲಿಯಾರ್ | ಖಾತೆ ನಂ.67<br>ಖಾತೆ ನಂ.66<br>ಸಿ.ಟಿ.ಎಸ್.ನಂ. 78,80,81 | 31.50 | ಖಾಲಿ ಜಾಗ |
| 16 | – | ವ್ಯವಸ್ಥಾಪಕ ನಿರ್ದೇಶಕರು ಕ.ರಾ.ರ.ಸಾ.ಸಂಸ್ಥೆ, ಬೆಂಗಳೂರು | ಖಾತೆ ನಂ.04<br>ಸಿ.ಟಿ.ಎಸ್.ನಂ.17 | 127.12 | ಖಾಲಿ ಜಾಗ ಕಾಂಪೌಂಡ್ |
| 17 | ಮುನಿಸ್ವಾಮಪ್ಪ<br>ಕೃಷ್ಣಮೂರ್ತಿ<br>ಎಂ.ವೆಂಕಟೇಶ<br>ವೈ.ಎಂ.ರಾಮು<br>ಎಂ.ನಾರಾಯಣ ಸ್ವಾಮಿ | ವೈ.ಎಂ.ರಾಮು | ಖಾತೆ ನಂ.17<br>ಸಿ.ಟಿ.ಎಸ್.ನಂ.18ಎ | 38.472 | ಖಾಲಿ ಜಾಗ ಕಾಂಪೌಂಡ್ |
| 18 | ಹಿಂದ್ ಮರ್ಸೆಂಟೈಲ್ ಕಾರ್ಪೋರೇಷನ್ ಲಿ. | ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿ., ಬೆಂಗಳೂರು | ಖಾತೆ ನಂ.62/1<br>ಸಿ.ಟಿ.ಎಸ್.ನಂ.2 | 200.00 | ಖಾಲಿ ಜಾಗ |

ಈ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು ನೀಡಿರುವ ವ್ಯಾಲ್ಯುಯೇಷನ್ ಪಟ್ಟಿಯಂತೆ, ಪಾಲಿಕೆಯು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ವಿಸ್ತೀರ್ಣ ಒಟ್ಟು 1186.15 ಚ.ಮೀ. ಜಾಗ ಮತ್ತು 1462.00 ಚದರ ಅಡಿ ಕಟ್ಟಡ ಆಗಿದ್ದು, ಇದರ ಭೂ-ಪರಿಹಾರಕ್ಕೆ ಸರ್ಕಾರಿ ಮಾರುಕಟ್ಟೆ ಮಾರ್ಗ ಸೂಚಿಯನ್ವಯ ಪ್ರಸಕ್ತ ಮಾರುಕಟ್ಟೆ ದರದಂತೆ, ರೂ.7,00,99,352-00 ಗಳಾಗುತ್ತದೆಯೆಂದು, ಭೂ-ಸ್ವಾಧೀನ ಕಾಯ್ದೆಯಡಿಯಲ್ಲಿ ಇದರ ಜೊತೆಗೆ ಇತರೆ ಬಾಬ್ತುಗಳನ್ನೊಳಗೊಂಡಂತೆ ತಯಾರಿಸಲಾದ ಅಂದಾಜು ಈ ರೀತಿ ಇರುತ್ತದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



I 1) 1186.15 ಚ.ಮೀ. ಅಥವಾ 12763 ಚ.ಅಡಿ ಜಾಗಕ್ಕೆ ಚದರ

| | | |
|---|---|---|
| ಅಡಿ 1ಕ್ಕೆ ರೂ.3500/-ಗಳಂತೆ | : | 4,46,70,500-00 |
| 2) 1462 ಚದರ ಅಡಿ ಕಟ್ಟಡಕ್ಕೆ | : | 8,48,560-00 |
| 3) ಶಾಸನ ಬದ್ಧ ಭತ್ಯೆ-ಶೇ.30% ರಂತೆ | : | 1,36,55,718-00 |
| 4) ಶೇ.12 ರಷ್ಟು ಅಧಿಕ ಮಾರುಕಟ್ಟೆ ದರ (2 ವರ್ಷಗಳಿಗೆ) | : | 1,09,24,574-00 |
| ಒಟ್ಟು | | **7,00,99,352-00** |

II **ಸರ್ಕಾರಿ ವೆಚ್ಚಗಳು**

| | | |
|---|---|---|
| 1) ಶೇ.10 ರಷ್ಟು ಆಡಳಿತ ವೆಚ್ಚ | : | 70,09,935-00 |
| 2) ಶೇ.1 ರಷ್ಟು ಆಡಿಟ್ ವೆಚ್ಚ | : | 7,00,993-00 |
| 3) ಪ್ರಕಟಣಾ ವೆಚ್ಚ | : | 3,00,000-00 |
| ಒಟ್ಟು | | **80,10,928-00** |

**I+IIರ ಒಟ್ಟು ಮೊತ್ತ ರೂ. : 7,81,10,280-00**

ಮೇಲ್ಕಂಡ ಸ್ವತ್ತುಗಳ ಅಂದಾಜು ಪರಿಹಾರ ಮತ್ತು ಇತರೇ ಮೊತ್ತ ಒಟ್ಟು ರೂ. **7,81,10,280-00** (ಏಳು ಕೋಟಿ ಎಂಭತ್ತೊಂದು ಲಕ್ಷದ ಹತ್ತು ಸಾವಿರದ ಎರಡು ನೂರ ಎಂಭತ್ತು ರೂಪಾಯಿಗಳು ಮಾತ್ರ) ಗಳಾಗಿದ್ದು, ಹಾಗೂ ಭೂ-ಸ್ವಾಧೀನ ಕಾಯ್ದೆಯನ್ವಯ ಭೂ-ಸ್ವಾಧೀನಪಡಿಸಿಕೊಳ್ಳಲು ಮತ್ತು ಪರಿಹಾರ ಪಾವತಿಸಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾಜ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



I 1) 1186.15 ಚ.ಮೀ. ಅಥವಾ 12763 ಚ.ಅಡಿ ಜಾಗಕ್ಕೆ ಚದರ

| | | | |
|---|---|---|---|
| | ಅಡಿ 1ಕ್ಕೆ ರೂ.3500/-ಗಳಂತೆ | : | 4,46,70,500-00 |
| 2) | 1462 ಚದರ ಅಡಿ ಕಟ್ಟಡಕ್ಕೆ | : | 8,48,560-00 |
| 3) | ಶಾಸನ ಬದ್ಧ ಭತ್ಯೆ-ಶೇ.30% ರಂತೆ | : | 1,36,55,718-00 |
| 4) | ಶೇ.12 ರಷ್ಟು ಅಧಿಕ ಮಾರುಕಟ್ಟೆ ದರ (2 ವರ್ಷಗಳಿಗೆ) | : | 1,09,24,574-00 |
| | ಒಟ್ಟು | | **7,00,99,352-00** |

II **ಸರ್ಕಾರಿ ವೆಚ್ಚಗಳು**

| | | | |
|---|---|---|---|
| 1) | ಶೇ.10 ರಷ್ಟು ಆಡಳಿತ ವೆಚ್ಚ | : | 70,09,935-00 |
| 2) | ಶೇ.1 ರಷ್ಟು ಆಡಿಟ್ ವೆಚ್ಚ | : | 7,00,993-00 |
| 3) | ಪ್ರಕಟಣಾ ವೆಚ್ಚ | : | 3,00,000-00 |
| | ಒಟ್ಟು | | **80,10,928-00** |

**I+II**ರ ಒಟ್ಟು ಮೊತ್ತ ರೂ. : **7,81,10,280-00**

ಮೇಲ್ಕಂಡ ಸ್ವತ್ತುಗಳ ಅಂದಾಜು ಪರಿಹಾರ ಮತ್ತು ಇತರೇ ಮೊತ್ತ ಒಟ್ಟು ರೂ. **7,81,10,280-00** (ಏಳು ಕೋಟಿ ಎಂಭತ್ತೊಂದು ಲಕ್ಷದ ಹತ್ತು ಸಾವಿರದ ಎರಡು ನೂರ ಎಂಭತ್ತು ರೂಪಾಯಿಗಳು ಮಾತ್ರ) ಗಳಾಗಿದ್ದು, ಹಾಗೂ ಭೂ-ಸ್ವಾಧೀನ ಕಾಯ್ದೆಯನ್ವಯ ಭೂ-ಸ್ವಾಧೀನಪಡಿಸಿಕೊಳ್ಳಲು ಮತ್ತು ಪರಿಹಾರ ಪಾವತಿಸಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:302/2008–09**

ಉಪ ಆಯುಕ್ತರು (ಕಂದಾಯ) ಉನ್ನತ ಮೌಲ್ಯಮಾಪನ ಕೋಶ ಕಛೇರಿಗೆ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊಸದಾಗಿ High Vaule Assessment Cell ಅನ್ನು ಪ್ರಾರಂಭಿಸಿದ್ದು, ಈ ಸೆಲ್‌ನ ಕಾರ್ಯನಿರ್ವಹಣೆಯು ಹಳೆ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ 16200 ಚದರಡಿಗಳ ಮೇಲ್ಪಟ್ಟ ನಿವೇಶನಗಳಲ್ಲಿನ ಆಸ್ತಿಗಳಿಗೆ ತೆರಿಗೆ ಪರಿಷ್ಕರಣೆ ಮಾಡಿದ ಮತ್ತು ಹೊಸ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶಗಳಲ್ಲಿ 21500 ಚದರಡಿಗಳ ಮೇಲ್ಪಟ್ಟ ನಿವೇಶನಗಳಲ್ಲಿನ ಆಸ್ತಿಗಳಿಗೆ ತೆರಿಗೆ ಪರಿಷ್ಕರಣೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗುವ ಆಕ್ಷೇಪಣೆಗಳ ವಿಚಾರಣೆ ಮತ್ತು ವಿಲೇವಾರಿ ಮಾಡುವ ಕಾರ್ಯನಿರ್ವಹಣೆಯಾಗಿರುತ್ತದೆ. ಸದರಿ High Vaule Assessment Cell ನ ಕಾರ್ಯನಿರ್ವಹಣೆಗೆ ಉಪ ಆಯುಕ್ತರು (ಕಂದಾಯ–2) ಒಂದು ಹುದ್ದೆಯನ್ನು ಸೃಜಿಸಲು ಮಾನ್ಯ ಆಡಳಿತಗಾರರು ವಿಷಯ ಸಂಖ್ಯೆ:306/2007–08 ದಿನಾಂಕ:29/12/2007 ರ ನಡವಳಿಯಲ್ಲಿ ಅನುಮೋದನೆ ನೀಡಿರುತ್ತಾರೆ.

ಸದರಿ Cell ನ ಕಾರ್ಯನಿರ್ವಹಣೆಗೆ ಈಗಾಗಲೇ ಕಂದಾಯ ಅಧಿಕಾರಿ (ಪಶ್ಚಿಮ) ರವರನ್ನು ಪ್ರಭಾರದ ಉಪ ಆಯುಕ್ತರು (ಕಂದಾಯ–2) ಆಗಿ ಕಾರ್ಯನಿರ್ವಹಿಸಲು ನಿಯೋಜಿಸಲಾಗಿರುತ್ತದೆ. ಹಾಗೂ ಸದರಿ ಉಪ ಆಯುಕ್ತರು (ಕಂದಾಯ–2) ಉನ್ನತ ಮೌಲ್ಯಮಾಪನ ಕೋಶದ ಕಛೇರಿಯಲ್ಲಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಬಿ12(1)ಪಿಆರ್/196/07–08, ದಿನಾಂಕ:24/10/2007 ರಂತೆ 5 ಮಂದಿ ಮೌಲ್ಯಮಾಪಕರು ಮತ್ತು 7 ಮಂದಿ ಕಂದಾಯ ಪರಿವೀಕ್ಷಕರು ವಿವಿಧ ಕಛೇರಿಗಳಿಂದ ಓ.ಓ.ಡಿ. ಆಧಾರದ ಮೇಲೆ ನಿಯೋಜಿಸಲಾಗಿರುತ್ತದೆ. ಆದರೆ, ಚುನಾವಣೆ ಕೆಲಸ ಕಾರ್ಯಗಳ ನಿಮಿತ್ತ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಸದರಿ ನೌಕರರುಗಳನ್ನು ಅವರ ಕಛೇರಿಗಳಿಂದ ಬಿಡುಗಡೆ ಮಾಡಿ ಸದರಿ ಉನ್ನತ ಮೌಲ್ಯಮಾಪನ ಕೋಶ ಕಛೇರಿಗೆ ಕಳುಹಿಸಿರುವುದಿಲ್ಲ. ಉನ್ನತ ಮೌಲ್ಯಮಾಪನ ಕೋಶ ಕಛೇರಿಯಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ಇರುವುದರಿಂದ ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ನೇಮಕ ಮಾಡಿದ್ದಲ್ಲಿ ಆಯುಕ್ತರವರು ನೀಡಿರುವ ಸೂಚನೆಗಳಂತೆ ಕಟ್ಟಡಗಳ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. .

ಈ ಹಿನ್ನೆಲೆಯಲ್ಲಿ ಉನ್ನತ ಮೌಲ್ಯಮಾಪನ ಕೋಶದ ವ್ಯಾಪ್ತಿಗೆ ಬರುವ ಹಳೆ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ 16200 ಚದರಡಿಗಳ ಮೇಲ್ಪಟ್ಟ ನಿವೇಶನಗಳಲ್ಲಿನ ಆಸ್ತಿಗಳಿಗೆ ತೆರಿಗೆ ಪರಿಷ್ಕರಣೆ ಮಾಡಿದ ಮತ್ತು ಹೊಸ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶಗಳಲ್ಲಿ 21500 ಚದರಡಿಗಳ ಮೇಲ್ಪಟ್ಟ ನಿವೇಶನಗಳಲ್ಲಿನ ಆಸ್ತಿಗಳಿಗೆ ತೆರಿಗೆ ಪರಿಷ್ಕರಣೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗುವ ಆಕ್ಷೇಪಣೆಗಳ ವಿಚಾರಣೆ ಮತ್ತು ವಿಲೇವಾರಿ ಮಾಡುವ ಕಾರ್ಯನಿರ್ವಹಿಸಲು ಹಾಗೂ ಸದರಿ ಪ್ರದೇಶಗಳಲ್ಲಿ ಹಲವಾರು ಕಟ್ಟಡಗಳ ಖಾತೆಗಳನ್ನು ನೊಂದಾಯಿಸದೇ ಇರುವುದು ಕಂಡು ಬಂದಿರುತ್ತದೆ. ಈಗಾಗಲೇ ಕಟ್ಟಿರುವ

. . . 2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಕಟ್ಟಡಗಳಿಗೆ ಸೂಕ್ತ ದಾಖಲಾತಿಗಳಿದ್ದಲ್ಲಿ ಅದರಂತೆ, ಖಾತೆಗಳನ್ನು ನೊಂದಾಯಿಸಿಕೊಳ್ಳಲು ಕ್ರಮ ಜರುಗಿಸಬೇಕಾಗಿರುತ್ತದೆ. ಈ ಎಲ್ಲಾ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ಈ ಕೆಳಕಂಡ ಸಿಬ್ಬಂದಿಗಳನ್ನು ಖಾಯಂ ಆಗಿ ಪೂರ್ಣ ಪ್ರಮಾಣದಲ್ಲಿ ನೇಮಿಸಲು ದಿನಾಂಕ:27/05/08 ರಂದು ಉಪ ಆಯುಕ್ತರು (ಕಂದಾಯ–2) ಉನ್ನತ ಮೌಲ್ಯಮಾಪನ ಕೋಶರವರು ಕೋರಿರುತ್ತಾರೆ.

ಈ ಮೇರೆಗೆ ವಿಶೇಷ ಆಯುಕ್ತರು (ಸಂಪನ್ಮೂಲ ಮತ್ತು ಹಣಕಾಸು) ರವರ ವರದಿಯಲ್ಲಿ ಮಾನ್ಯ ಆಡಳಿತಗಾರರ ಅನುಮೋದನೆಯನ್ನು ಪಡೆದು, ಕೆಳಕಂಡ ಸಿಬ್ಬಂದಿಗಳನ್ನು ಉಪ ಆಯುಕ್ತರು (ಕಂದಾಯ–2) ಉನ್ನತ ಮಾಲ್ಯಮಾಪನ ಕೋಶ ಕಛೇರಿಗೆ ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ.

**ಉನ್ನತ ಮಾಲ್ಯಮಾಪನ ಕೋಶ ಕಛೇರಿಗೆ ಖಾಯಂ ಆಗಿ ನೇಮಿಸಬೇಕಾಗಿರುವ ಹುದ್ದೆಗಳು**

| ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ |
|---|---|
| ಸಹಾಯಕ ಕಂದಾಯ ಅಧಿಕಾರಿಗಳು | 2 |
| ವ್ಯವಸ್ಥಾಪಕರು | 1 |
| ಪ್ರಥಮ ದರ್ಜೆ ಗುಮಾಸ್ತರು | 2 |
| ದ್ವಿತೀಯ ದರ್ಜೆ ಗುಮಾಸ್ತರು | 2 |
| ಕಂದಾಯ ಪರಿವೀಕ್ಷಕರು | 8 |
| ಮೌಲ್ಯಮಾಪಕರು | 4 |
| ಕಂದಾಯ ವಸೂಲಿಗಾರರು | 2 |
| ನಾಲ್ಕನೇ ದರ್ಜೆ ನೌಕರರು | 2 |
| ಶೀಘ್ರಲಿಪಿಗಾರರು | 1 |
| ಗಣಕಯಂತ್ರ ನಿರ್ವಾಹಕರು | 1 |
| ಒಟ್ಟು | 25 |

ಈ ಹಿನ್ನೆಲೆಯಲ್ಲಿ ಮೇಲ್ಕಂಡ 25 ವಿವಿಧ ವೃಂದದ ಸಿಬ್ಬಂದಿಗಳನ್ನು ಉಪ ಆಯುಕ್ತರು (ಕಂದಾಯ) ಉನ್ನತ ಮಾಲ್ಯಮಾಪನ ಕೋಶ ಕಛೇರಿಗೆ ಖಾಯಂ ಆಗಿ ನೇಮಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:303/2008–09**

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ಅನುದಾನ/ಸಹಾಯ ಧನವನ್ನು ಮಂಜೂರು ಮಾಡುವ ಬಗ್ಗೆ.

**ಪ್ರಸ್ತಾವನೆ:**

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬುಲ್ ಟೆಂಪಲ್ ರಸ್ತೆ, ನ.ರಾ.ಕಾಲೋನಿ, ಬೆಂಗಳೂರು – 19 ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯು ಅನೇಕ ದಶಕಗಳ ಕಾಲ ಶ್ರಮಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಪ್ರಮುಖರಲ್ಲೊಬ್ಬರು ಡಾ:ಡಿ.ವಿ.ಗುಂಡಪ್ಪ, ಸಾಹಿತ್ಯ, ಪತ್ರಿಕೋದ್ಯಮ ಈ ಎರಡೂ ಮಾಧ್ಯಮಗಳನ್ನು ಶ್ರೀಮಂತಗೊಳಿಸಿದವರೆಂದೂ, ಅವರ "ಮಂಕುತಿಮ್ಮನ ಕಗ್ಗ" ಮತ್ತು ಇತರ ಹತ್ತಾರು ಕೃತಿಗಳು ಎಂದಿಗೂ ಸಮಾಜಕ್ಕೆ ದಾರಿ ದೀವಿಗೆಗಳಾಗಿವೆಯೆಂದು, ಕರ್ನಾಟಕದ ಪುರೋಭಿವೃದ್ಧಿಗಾಗಿ ಎಪ್ಪತ್ತು ವರ್ಷಗಳ ಕಾಲ ಪರಿಶ್ರಮ ಮಾಡಿದವರು ಡಿ.ವಿ.ಜಿ.ಯವರೆಂದು ತಿಳಿಸಿ, ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ ಪ್ರಬುದ್ಧ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಬೆಳವಣಿಗೆಗಾಗಿ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಮತ್ತು ಜನಾಭಿಪ್ರಾಯವನ್ನು ನ್ಯಾಯಾಂಗ, ರಾಜ್ಯಾಂಗ ಮತ್ತು ಶಾಸಕಾಂಗ ಪ್ರತಿನಿಧಿಗಳಿಗೆ ತಿಳಿಸುವ ಮಾಧ್ಯಮವಾಗಿ ಡಿ.ವಿ.ಜಿ. ಅವರು ಕಟ್ಟಿ ಬೆಳೆಸಿದ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ರಾಜ್ಯದಲ್ಲಿ ಮಾತ್ರವಲ್ಲದೇ ದೇಶದಲ್ಲೇ ಪ್ರತಿಷ್ಠೆ ಪಡೆದುಕೊಂಡಿದೆ. ಸಂಸ್ಥೆಯು ಕಳೆದ ಆರು ದಶಕಗಳುದ್ದಕ್ಕೂ ನಿರಂತರವಾಗಿ ವಿವಿಧ ಮುಖ ಸಾರ್ವಜನಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆಯೆಂದು ತಿಳಿಸಿ, ಡಿ.ವಿ.ಜಿ.ಯವರ 125ನೇ ಜನ್ಮದಿನೋತ್ಸವದ ಸ್ಮರಣೆ ಸಂಬಂಧ "ಡಿ.ವಿ.ಜಿ. ಸ್ಮಾರಕ ಭವನ" ಕಟ್ಟಡ ನಿರ್ಮಾಣ ಹಾಗೂ ಅಗತ್ಯವಾದ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವ ಸಂಬಂಧ ರೂ.3,24,00,000/– ಗಳ ಅಂದಾಜುಪಟ್ಟಿ ಸಲ್ಲಿಸಿ, ಪಾಲಿಕೆ ವತಿಯಿಂದ ರೂ.1.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಆಡಳಿತಗಾರರವರ ಗಮನಕ್ಕೆ ತರುತ್ತಾ, ಪ್ರಸ್ತಾಪಿತ ಸಂಸ್ಥೆಯ ಕಾರ್ಯಚಟುವಟಿಗೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮತ್ತು ಈ ಸಂಸ್ಥೆಯವರು ಕಟ್ಟಲು ಉದ್ದೇಶಿಸಿರುವ "ಡಿ.ವಿ.ಜಿ. ಸ್ಮಾರಕ ಭವನ" ಕಟ್ಟಡ ನಿರ್ಮಾಣಕ್ಕೆ ಅನುಕೂಲವಾಗುವಂತೆ, 2008–09 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಕೊಡುಗೆ ಮತ್ತು ಸಹಾಯಾನುದಾನದಡಿ ಮೀಸಲಿರಿಸಿರುವ ರೂ.300.00 ಲಕ್ಷಗಳ ಅನುದಾನದಲ್ಲಿ ರೂ.5.00 ಲಕ್ಷಗಳ ಅನುದಾನವನ್ನು ಪ್ರಸ್ತಾಪಿತ ಸಂಸ್ಥೆಗೆ 2008–09 ನೇ ಸಾಲಿಗೆ ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ...ಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ...ಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು

**ವಿಷಯದ ಸಂಖ್ಯೆ:309/2008–09**

2007–08ನೇ ಸಾಲಿನಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ, ನಿರುದ್ಯೋಗಿಗಳಿಗೆ ಪಾಲಿಕೆ ಆರ್ಥಿಕ ಸ್ವಾವಲಂಬನೆ ಯೋಜನೆಯಡಿಯಲ್ಲಿ TATA (ACE) ವಾಹನಗಳನ್ನು ನೀಡಲು ಸಹಾಯ ಧನವನ್ನು ಹೆಚ್ಚಿಸುವ ಬಗ್ಗೆ.

**ಪ್ರಸ್ತಾವನೆ:**

2007–08ನೇ ಸಾಲಿನಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ, "ನಿರುದ್ಯೋಗಿಗಳಿಗೆ ಪಾಲಿಕೆ ಆರ್ಥಿಕ ಸ್ವಾವಲಂಬನೆ" ಯೋಜನೆಯಡಿಯಲ್ಲಿ TATA (ACE) ವಾಹನಗಳಿಗೆ ಸಹಾಯ ಧನವನ್ನು ನೀಡಲಾಗುತ್ತಿದ್ದು, ಪ್ರತಿ ಫಲಾನುಭವಿಯ ಪ್ರಾರಂಭಿಕ ಠೇವಣಿ ರೂ.25,000/– ಗಳನ್ನು ಪಾವತಿಸಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವತಿಯಿಂದ ರೂ.50,000/– ಗಳ ಸಹಾಯಧನ ಮಂಜೂರಾತಿಗೆ ವಿಷಯದ ಸಂಖ್ಯೆ:125/07–08, ದಿನಾಂಕ:10/07/2007 ರಲ್ಲಿ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. ಸದರಿ ಯೋಜನೆಯಡಿಯಲ್ಲಿ 08 ವಲಯಗಳಲ್ಲಿ ಸುಮಾರು 2250 ನಿರುದ್ಯೋಗಿ ಯುವಕ/ಯುವತಿಯವರಿಗೆ ಪ್ರತಿ ಫಲಾನುಭವಿಗೆ ರೂ.50,000/– ಗಳ ಸಹಾಯ ಧನವನ್ನು ಮಂಜೂರಾತಿ ಮಾಡುವುದು ಉದ್ದೇಶವಾಗಿದ್ದು, ಅದರಂತೆ, ವಲಯಗಳಲ್ಲಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಆದರೆ, ಆಯ್ಕೆಯಾದ ಫಲಾನುಭವಿಗಳು, ಸಂಘ ಸಂಸ್ಥೆಗಳು ಈ ಹಿಂದಿನ ಸಾಲುಗಳಲ್ಲಿ ಫಲಾನುಭವಿಯಿಂದ ರೂ.10,000/– ಪ್ರಾರಂಭಿಕ ಠೇವಣಿಯೊಂದಿಗೆ ರೂ.1.00 ಲಕ್ಷಗಳ ಸಹಾಯ ಧನವನ್ನು ಮಂಜೂರಾತಿ ನೀಡಲಾಗುತಿತ್ತು. 2007–08ನೇ ಸಾಲಿನಲ್ಲಿ ಪ್ರಾರಂಭಿಕ ಠೇವಣಿ ರೂ.25,000/– ಅಲ್ಲದೆ ರೂ.50,000/– ಸಹಾಯ ಧನ ಕಡಿಮೆ ಮಾಡಿರುವ ಬಗ್ಗೆ ಆಕ್ಷೇಪಣೆ ಮಾಡಿರುತ್ತಾರೆ.

ವಲಯ ಅಪರ ಆಯುಕ್ತರು (ದಕ್ಷಿಣ) ರವರು ಸಹಾಯಧನವನ್ನು ರೂ.50,000/–ಗಳಿಂದ ರೂ.1.00 ಲಕ್ಷಕ್ಕೆ ಹೆಚ್ಚಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರವರ ಅಭಿಪ್ರಾಯವನ್ನು ಕೋರಲಾಗಿ, ಅಪರ ಆಯುಕ್ತರು (ಮಹದೇವಪುರ) ಮತ್ತು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಸಹಾಯ ಧನವನ್ನು ಹೆಚ್ಚಿಸುವಂತೆ ತಿಳಿಸಿರುತ್ತಾರೆ.

ದಿನಾಂಕ:11–06–2008ರಂದು ಮಾನ್ಯ ವಿಶೇಷ ಅಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳ ಸಭೆಯಲ್ಲಿ 2007–08 ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕೈಗೊಳ್ಳಲಾಗಿ, ಸದರಿ ಸಭೆಯಲ್ಲಿ "ಆರ್ಥಿಕ ಸ್ವಾವಲಂಬನೆ ಯೋಜನೆಯ" ಸಹಾಯ ಧನ ಹೆಚ್ಚಿಸುವ ಬಗ್ಗೆ ಚರ್ಚಿಸಲಾಗಿ, 2007–08ನೇ ಸಾಲಿಗೆ ಪ್ರತಿ ವಲಯದಲ್ಲಿ ಸದರಿ ಯೋಜನೆಗೆ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ರೂ.100.00 ಲಕ್ಷಗಳು ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರಿಗೆ ರೂ.37.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. 2007–08ನೇ ಸಾಲಿನಲ್ಲಿ ಸದರಿ ಯೋಜನೆಗೆ ಸ್ವೀಕರಿಸಿರುವ ಅರ್ಜಿಗಳ ಬಗ್ಗೆ ಪರಿಶೀಲಿಸಲಾಗಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಆರ್ಥಿಕ ಗುರಿಗೆ ತೀರಾ ಕಡಿಮೆ ಇರುತ್ತದೆ. ಉದಾಹರಣೆಗೆ ಪೂರ್ವ ವಲಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ 100.00 ಲಕ್ಷಗಳ ಆರ್ಥಿಕ ಗುರಿಗೆ 42 ಫಲಾನುಭವಿಗಳು ಮಾತ್ರ ಅರ್ಜಿ ಸಲ್ಲಿಸಿರುತ್ತಾರೆ. ಅದೇ ರೀತಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ರೂ.37.00 ಲಕ್ಷಗಳ ಅರ್ಥಿಕ ಗುರಿಗೆ 29 ಫಲಾನುಭವಿಗಳು ಮಾತ್ರ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಎಲ್ಲಾ ಅಪರ/ಜಂಟಿ ಆಯುಕ್ತರುಗಳ ಜೊತೆ ಚರ್ಚಿಸಿದಂತೆ 2007–08ನೇ ಸಾಲಿನಲ್ಲಿ ಪ್ರಾರಂಭಿಕ ಠೇವಣಿ ರೂ.25,000/– ಗಳಾಗಿರುವುದರಿಂದ, ಅಲ್ಲದೆ ಸಹಾಯ ಧನ ಸಹ ರೂ.50,000/– ಗಳಿಗೆ ಸೀಮಿತವಾಗಿರುವುದರಿಂದ ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆಯಲು ಮುಂದೆ ಬರುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳ ಪ್ರಾಯಿಸಿರುವಂತೆ 2007–08ನೇ ಸಾಲಿನಲ್ಲಿ ಶೇ.18 ರ ಅನುದಾನ ಮುಂದುವರೆಯುವುದರಿಂದ ಪರಿಶಿಷ್ಟ ತಿ /ಪರಿಶಿಷ್ಟ ಪಂಗಡದ ಆರ್ಥಿಕ ಸ್ವಾವಲಂಬನೆ ಯೋಜನೆಗೆ ನಿಗಧಿಪಡಿಸಿದ ಆರ್ಥಿಕ ಗುರಿಗೆ ತಕ್ಕಂತೆ ಭೌತಿಕ ಯನ್ನು ಪರಿಷ್ಕರಿಸಿಕೊಳ್ಳಲಾಗುವುದೆಂದು, ಅದೇ ರೀತಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ 07–08ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ 2008–09ನೇ ಸಾಲಿನ ಆಯವ್ಯಯದಲ್ಲಿ ಗುರಿ ಗಧಿಪಡಿಸಿಕೊಂಡು, ಫಲಾನುಭವಿಯ ಪ್ರಾರಂಭಿಕ ಠೇವಣಿ ರೂ.25,000/– ಗಳೊಂದಿಗೆ ಸಹಾಯಧನ .50,000/–ಗಳಿಂದ ರೂ.1.00 ಲಕ್ಷಕ್ಕೆ ಹೆಚ್ಚಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಹೆಚ್ಚಿಸಿರುವ ಸಹಾಯ ನವನ್ನು ಸಂಬಂಧಪಟ್ಟ ವಾಹನ ವಿತರಿಸುವ ಸಂಸ್ಥೆಗಳಿಗೆ ನಿಯಮಾನುಸಾರ ಬಿಡುಗಡೆ ಮಾಡುವಂತೆ ಸಭೆಯಲ್ಲಿ ರ್ಮಾನಿಸಿದೆ.

ಈ ಹಿನ್ನಲೆಯಲ್ಲಿ ಸಭೆಯ ತೀರ್ಮಾನಕ್ಕೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

ರ್ಮಾನ: ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:304/2008-09**

ದಾಸರಹಳ್ಳಿ ವಲಯದ ನೆಲಗದರನಹಳ್ಳಿ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ದಾಸರಹಳ್ಳಿ ವಲಯದ ನೆಲಗದರನಹಳ್ಳಿ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಆಡಳಿತಾತ್ಮಕ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು 2007-08 ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದರಪಟ್ಟಿಗಳ ಆಧಾರದ ಮೇಲೆ ರೂ.70.00 ಲಕ್ಷಗಳ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ಸಿದ್ದಪಡಿಸಿರುತ್ತಾರೆ.

ಮೇಲ್ಕಂಡ ಅಂದಾಜು ಪಟ್ಟಿಯಲ್ಲಿ ಸಿವಿಲ್ ಕಟ್ಟಡ ಕಾಮಗಾರಿ, ವಿದ್ಯುತ್ತೀಕರಣ, ನೀರು ಸರಬರಾಜು, ಶೌಚಾಲಯ ವ್ಯವಸ್ಥೆ ಹಾಗೂ ಮುಖ್ಯವಾಗಿ ಮಳೆ ನೀರು ಹಿಂಗಿಸುವುದು (Rain Water Harvesting) ಇತ್ಯಾದಿಗಳು ಒಳಗೊಂಡಿರುತ್ತದೆ.

ಸರ್ಕಾರದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರ ದಾಸರಹಳ್ಳಿ ವಲಯವು *ಹೊಸದಾಗಿ ವಿಂಗಡನೆಯಾಗಿದ್ದು, ಆಡಳಿತದ ಹಿತದೃಷ್ಟಿಯಿಂದ ವಲಯ ಕಛೇರಿ ಕಟ್ಟಡದ ನಿರ್ಮಾಣ ಕಾಮಗಾರಿಯು* ಅವಶ್ಯಕವಾಗಿರುತ್ತದೆ.

ಆದ್ದರಿಂದ, ನೆಲಗದರನಹಳ್ಳಿ ಉಪ ವಿಭಾಗದ ಕಛೇರಿಗೆ ವಲಯ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.70.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 03/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು

**ವಿಷಯದ ಸಂಖ್ಯೆ:305/2008-09**

Asphalting to Ring Road from Mysore road junction to Silk Board junction via J.P.Nagar, BTM Layout Ch.5.30 Km to 7.10 Km Left Side Carriage way (Northern side) ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore road junction to Silk Board junction via J.P.Nagar, BTM Layout Ch.5.30 Km to 7.10 Km Left Side Carriage way (Northern side) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಎ.ಮುನಿರೆಡ್ಡಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.75 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀರಿಕ್ಷಿಸಿ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.99,74,285.27 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು ಶೇಕಡ 47.74% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 30.99% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.46% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,30,65,251.53 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.46% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,30,65,251.53 (ರೂ. ಒಂದು ಕೋಟಿ ಮೂವತ್ತು ಲಕ್ಷದ ಅರವತ್ತೈದು ಸಾವಿರದ ಇನ್ನೂರ ಐವತ್ತೊಂದು ಮತ್ತು ಪೈಸೆ ಐವತ್ತ್ಮೂರು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

46

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:306/2008-09**

Asphalting to Ring Road from Mysore road junction to Silk Board junction via J.P.Nagar, BTM Layout Ch.11.30 Km to 13.25 Km Left Side Carriage way (Northern side) ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore road junction to Silk Board junction via J.P.Nagar, BTM Layout Ch.11.30 Km to 13.25 Km Left Side Carriage way (Northern side) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎ.ಮುನಿರೆಡ್ಡಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.98.50 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀರಿಕ್ಷಿಸಿ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.98,10,623.63 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು ಶೇಕಡ 54.12% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 30.76% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.48% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,28,27,982.55 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.48% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,28,27,982.55 (ರೂ. ಒಂದು ಕೋಟಿ ಇಪ್ಪತ್ತೆಂಟು ಲಕ್ಷದ ಇಪ್ಪತ್ತೇಳು ಸಾವಿರದ ಒಂಭೈನೂರ ಎಂಭತ್ತೆರಡು ಮತ್ತು ಪೈಸೆ ಐವತ್ತೈದು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು

ವಿಷಯದ ಸಂಖ್ಯೆ:307/2008–09

Providing Asphalting to roads at 8th Block, Koramangala in Ward No.67 ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Providing Asphalting to roads at 8th Block, Koramangala in Ward No.67 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.85.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.83,58,285.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು ಶೇಕಡ 38.01% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 32.21% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.45% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಅನುಮೋದನೆಗೆ ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,10,50,312.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರು ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು 2007–08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.45% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,10,50,312.00 (ರೂ. ಒಂದು ಕೋಟಿ ಹತ್ತು ಲಕ್ಷದ ಐವತ್ತು ಸಾವಿರದ ಮೂನ್ನೂರ ಹನ್ನೆರಡು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:308/2008–09**

ದಾಸರಹಳ್ಳಿ ವಲಯದ ಬಾಗಲಗುಂಟೆ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ದಾಸರಹಳ್ಳಿ ವಲಯದ ಬಾಗಲಗುಂಟೆ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ ಕೈಗೆತ್ತಿಕೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಆಡಳಿತಾತ್ಮಕ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು 2007–08 ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದರಪಟ್ಟಿಗಳ ಆಧಾರದ ಮೇಲೆ ರೂ.70.00 ಲಕ್ಷಗಳ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ಸಿದ್ದಪಡಿಸಿರುತ್ತಾರೆ.

ಮೇಲ್ಕಂಡ ಅಂದಾಜು ಪಟ್ಟಿಯಲ್ಲಿ ಸಿವಿಲ್ ಕಟ್ಟಡ ಕಾಮಗಾರಿ, ವಿದ್ಯುತ್ತೀಕರಣ, ನೀರು ಸರಬರಾಜು, ಶೌಚಾಲಯ ವ್ಯವಸ್ಥೆ ಹಾಗೂ ಮುಖ್ಯವಾಗಿ ಮಳೆ ನೀರು ಹಿಂಗಿಸುವುದು (Rain Water Harvesting) ಇತ್ಯಾದಿಗಳು ಒಳಗೊಂಡಿರುತ್ತದೆ.

ಸರ್ಕಾರದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರ ದಾಸರಹಳ್ಳಿ ವಲಯವು ಹೊಸದಾಗಿ ವಿಂಗಡನೆಯಾಗಿದ್ದು, ಆಡಳಿತದ ಹಿತದೃಷ್ಟಿಯಿಂದ ವಲಯ ಕಛೇರಿ ಕಟ್ಟಡದ ನಿರ್ಮಾಣದ ಕಾಮಗಾರಿಯು ಅವಶ್ಯಕವಾಗಿರುತ್ತದೆ.

ಆದ್ದರಿಂದ, ಬಾಗಲಗುಂಟೆ ಉಪ ವಿಭಾಗದ ಕಛೇರಿಗೆ ವಲಯ ಕಟ್ಟಡ ನಿರ್ಮಾಣ ಮಾಡಲು ಕಾಮಗಾರಿಯ ಅಂದಾಜು ಮೊತ್ತ ರೂ.70.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:309/2008–09**

ದಾಸರಹಳ್ಳಿ ವಲಯದ ಲಗ್ಗೆರೆ ಉಪ ವಿಭಾಗದಲ್ಲಿ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ದಾಸರಹಳ್ಳಿ ವಲಯದ ಲಗ್ಗೆರೆ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಆಡಳಿತಾತ್ಮಕ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು 2007–08 ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದರಪಟ್ಟಿಗಳ ಆಧಾರದ ಮೇಲೆ ರೂ.70.00 ಲಕ್ಷಗಳ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ಸಿದ್ಧಪಡಿಸಿರುತ್ತಾರೆ.

ಮೇಲ್ಕಂಡ ಅಂದಾಜು ಪಟ್ಟಿಯಲ್ಲಿ ಸಿವಿಲ್ ಕಟ್ಟಡ ಕಾಮಗಾರಿ, ವಿದ್ಯುತ್ತೀಕರಣ, ನೀರು ಸರಬರಾಜು, ಶೌಚಾಲಯ ವ್ಯವಸ್ಥೆ ಹಾಗೂ ಮುಖ್ಯವಾಗಿ ಮಳೆ ನೀರು ಹಿಂಗಿಸುವುದು (Rain Water Harvesting) ಇತ್ಯಾದಿಗಳು ಒಳಗೊಂಡಿರುತ್ತದೆ.

ಸರ್ಕಾರದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರ ದಾಸರಹಳ್ಳಿ ವಲಯವು ಹೊಸದಾಗಿ ವಿಂಗಡನೆಯಾಗಿದ್ದು, ಆಡಳಿತದ ಹಿತದೃಷ್ಟಿಯಿಂದ ವಲಯ ಕಛೇರಿ ಕಟ್ಟಡದ ನಿರ್ಮಾಣದ ಕಾಮಗಾರಿಯು ಅವಶ್ಯಕವಾಗಿರುತ್ತದೆ.

ಆದ್ದರಿಂದ, ಲಗ್ಗೆರೆ ಉಪ ವಿಭಾಗದ ಕಛೇರಿಗೆ ವಲಯ ಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.70.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/07/2008 ರ ನಡವಳಿಗಳು

**ವಿಷಯದ ಸಂಖ್ಯೆ:310/2008-09**

ದಾಸರಹಳ್ಳಿ ವಲಯದ ಚೊಕ್ಕಸಂದ್ರ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ದಾಸರಹಳ್ಳಿ ವಲಯದ ಚೊಕ್ಕಸಂದ್ರ ಉಪ ವಿಭಾಗ ಕಛೇರಿಗೆ ವಲಯ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ ಕೈಗೆತ್ತಿಕೊಳ್ಳಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಆಡಳಿತಾತ್ಮಕ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು 2007-08 ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದರಪಟ್ಟಿಗಳ ಆಧಾರದ ಮೇಲೆ ರೂ.70.00 ಲಕ್ಷಗಳಿಗೆ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ಸಿದ್ಧಪಡಿಸಿರುತ್ತಾರೆ.

ಮೇಲ್ಕಂಡ ಅಂದಾಜು ಪಟ್ಟಿಯಲ್ಲಿ ಸಿವಿಲ್ ಕಟ್ಟಡ ಕಾಮಗಾರಿ, ವಿದ್ಯುತ್ತೀಕರಣ, ನೀರು ಸರಬರಾಜು, ಶೌಚಾಲಯ ವ್ಯವಸ್ಥೆ ಹಾಗೂ ಮುಖ್ಯವಾಗಿ ಮಳೆ ನೀರು ಹಿಂಗಿಸುವುದು (Rain Water Harvesting) ಇತ್ಯಾದಿಗಳು ಒಳಗೊಂಡಿರುತ್ತದೆ.

ಸರ್ಕಾರದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರ ದಾಸರಹಳ್ಳಿ ವಲಯವು ಹೊಸದಾಗಿ ವಿಂಗಡನೆಯಾಗಿದ್ದು, ಆಡಳಿತದ ಹಿತದೃಷ್ಟಿಯಿಂದ ವಲಯ ಕಛೇರಿ ಕಟ್ಟಡದ ನಿರ್ಮಾಣ ಕಾಮಗಾರಿಯು ಅವಶ್ಯಕವಾಗಿರುತ್ತದೆ.

ಆದ್ದರಿಂದ, ಚೊಕ್ಕಸಂದ್ರ ಉಪ ವಿಭಾಗದ ಕಛೇರಿಗೆ ವಲಯ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.70.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು